ಕರ್ನಾಟಕ ಸರ್ಕಾರ

# ಉಪ ತಹಶೀಲ್ದಾರರು ಕರೂರು ಇವರ ನ್ಯಾಯಾಲಯ, ಕರೂರು.

ಸಂ:ಕಂ:.ವಿವಾದ:69/2015-16

ದಿ: 17-06-2016

ಉಪಸ್ಥಿತರು: ಜಿ. ಭೈರಣ್ಣ
ಉಪ ತಹಶೀಲ್ದಾರರು, ಕರೂರು.

**ವಾದಿಗಳು**

1) ದೊಡ್ಡ ಬಸಪ್ಪ ತಂದೆ: ದೊಡ್ಡ ಈರಣ್ಣ
2) ಮಲ್ಲಮ್ಮ ಗಂಡ: ದೊಡ್ಡ ಮಾರೆಪ್ಪ
3) ಅಂಜಿನಮ್ಮ ಗಂಡ: ಸಣ್ಣ ಮಾರೆಪ್ಪ
ಮುಷ್ಟಿಗಟ್ಟೆ ಗ್ರಾಮ ತಾ: ಜಿ: ಬಳ್ಳಾರಿ

**ಪ್ರತಿವಾದಿಗಳು**

ಯು. ನಗರಾಜ ತಂದೆ: ಯು. ಸಣ್ಣ ಮಾರೆಪ್ಪ ಲೇಟ್
ಮುಷ್ಟಿಗಟ್ಟೆ ಗ್ರಾಮ ತಾ: ಜಿ: ಬಳ್ಳಾರಿ

## ವಿವಾದಿತ ಜಮೀನಿನ ವಿವರ

| ಗ್ರಾಮದ ಹೆಸರು | ಸರ್ವೆನಂಬರ್ | ವಿಸ್ತೀರ್ಣ (ಎಕರೆ) | ಹ.ಬ. ಸಂಖ್ಯೆ: | ವಹಿವಾಟು ಸಂಖ್ಯೆ: |
|---|---|---|---|---|
| ಉತ್ತನೂರು ಗ್ರಾಮ | 8 C/1B<br>8C/3A<br>8C/3B<br>185/F2 | 0-62<br>0-50<br>0-53<br>2-90 | H-25/ 2015-16 | 46/2015-16 |

ಪೀಠಿಕೆ:-

ಸಿರುಗುಪ್ಪ ತಾಲೂಕಿನ **ಉತ್ತನೂರುಗ್ರಾಮದ ಸ.ನಂ.8C/1B** ವಿಸ್ತೀರ್ಣ **0-62, 8C/3A** ವಿಸ್ತೀರ್ಣ **0-50, 8C/3B** ವಿಸ್ತೀರ್ಣ **0-53 , 185/F2** ವಿಸ್ತೀರ್ಣ **2-90** ಸೆಂಟ್ಸ್ ಜಮೀನಿಗೆ ಸಂಭಂದಿಸಿದಂತೆ ಪೋತಿ ವಾರಸತ್ವ ಪ್ರಕಾರ 1) ದೊಡ್ಡ ಬಸಪ್ಪ ತಂದೆ: ದೊಡ್ಡ ಈರಣ್ಣ 2) ಮಲ್ಲಮ್ಮ ಗಂಡ: ದೊಡ್ಡ ಮಾರೆಪ್ಪ 3) ಅಂಜಿನಮ್ಮ ಗಂಡ: ಸಣ್ಣ ಮಾರೆಪ್ಪ ಮುಷ್ಟಿಗಟ್ಟೆ ಗ್ರಾಮ , ಬಳ್ಳಾರಿ ತಾಲೂಕ ಇವರ ಹೆಸರಿಗೆ ಜಂಟಿ ಖಾತೆಬದಲಾವಣೆ ಮಾಡಲು ನಮೂನೆ -21 ನ್ನು ಪ್ರಚುರ ಪಡಿಸಲಾಗಿ ನಿಗದಿತ ಅವಧಿಯೊಳಗೆ **ಯು. ನಾಗಬರಾಜ ತಂದೆ: ಯು. ಸಣ್ಣ ಮಾರೆಪ್ಪ ಲೇಟ್, ಮುಷ್ಟಿ ಗಟ್ಟೆ ಗ್ರಾಮ ಇವರು ದಿ: 30-10-2014** ರಂದು ತಕರಾರು ಅರ್ಜಿ ಸಲ್ಲಿಸಿರುತ್ತಾರೆ ಸದ್ರಿ ಕಡತವನ್ನು ಮುಂದಿನ ಸೂಕ್ತ ಕ್ರಮಕ್ಕಾಗಿ ಕಂದಾಯ ಪರಿವೀಕ್ಷಕರು ಕರೂರು ಇವರು ಈ ಕಛೇರಿಗೆ ಸಲ್ಲಿಸಿರುತ್ತಾರೆ.

ಕರ್ನಾಟಕ ಭೂಕಂದಾಯಕಾಯ್ದೆ 1964ರ ಕಲಂ129ರ ಅಡಿಯಲ್ಲಿ ವಿಚಾರಣೆಯನ್ನು ಕೈಗೊಳ್ಳಲು ತೀರ್ಮಾನಿಸುತ್ತಾ ಪ್ರಕರಣದಲ್ಲಿ ವಾದಿ-ಪ್ರತಿವಾದಿಗಳಿಗೆ ವಿಚಾರಣೆಗೆ ಹಾಜರಾಗಲು ಲಿಖಿತ ತಿಳುವಳಿಕೆ ನೋಟೀಸುನೀಡುತ್ತಾ ವಿಚಾರಣೆಯನ್ನು **18-3-2016, 02-4-2016, 13-5-2016, 3-6-2016** ಮತ್ತು **10-6-2016** ರಂದು ಪ್ರಕರಣಕ್ಕೆ ಸಂಭಂದಿಸಿದಂತೆ ವಿಚಾರಣೆ ನಡೆಸಲಾಯಿತು. ವಿಚಾರಣೆಯಲ್ಲಿ ವಾದಿ ಮತ್ತು ಪ್ರತಿವಾದಿಗಳಿಂದ ಮಂಡಿಸಿದ ವಾದವನ್ನು ಆಲಿಸುತ್ತಾ ವಿವಾದಕ್ಕೆ ಸಂಭಂದಿಸಿದಂತೆ ಕಾರಣಗಳು ಈ ರೀತಿ ಇರುವುದಾಗಿ ವ್ಯಕ್ತವಾಗಿದೆ.

ವಾದಿಗಳಾದ 1) ದೊಡ್ಡ ಬಸಪ್ಪ ತಂದೆ: ದೊಡ್ಡ ಈರಣ್ಣ 2) ಮಲ್ಲಮ್ಮ ಗಂಡ: ದೊಡ್ಡ ಮಾರೆಪ್ಪ 3) ಅಂಜಿನಮ್ಮ ಗಂಡ: ಸಣ್ಣ ಮಾರೆಪ್ಪ, ಮುಷ್ಟಗಟ್ಟಿ ಗ್ರಾಮ ಇವರು ಉತ್ತನೂರು ಗ್ರಾಮದ ಸ.ನಂ. **8C/1B** ವಿಸ್ತೀರ್ಣ **0-62, 8C/3A** ವಿಸ್ತೀರ್ಣ **0-50, 8C/3B** ವಿಸ್ತೀರ್ಣ **0-53 , 185/F2** ವಿಸ್ತೀರ್ಣ **2-90** ಸೆಂಟ್ಸ್ ಜಮೀನುಗಳು ನಮ್ಮ ತಂದೆ: ಹಾಗೂ ಮಾವನವರ ಹೆಸರಿನಲ್ಲಿದ್ದು ಅವರು ಮೃತರಾಗಿರುವುದರಿಂದ ಪೋತಿ ವಾರಸತ್ವ ಪ್ರಕಾರ ಜಂಟಿಹೆಸರಿಗೆ ಹಕ್ಕು ಬದಲಾವಣೆ ಮಾಡುವ ಸಂದರ್ಭದಲ್ಲಿ ನನಗೂ ಪಾಲು ಬರಬೇಕೆಂದು ಯು. ನಾಗರಾಜ ತಂದೆ: ಯು.ಸಣ್ಣ ಮಾರೆಪ್ಪ ಲೇಟ್ ಮುಷ್ಟಿಗಟ್ಟಿ ಗ್ರಾಮ ಇವರು ದಿ: 30-10-2015 ರಂದು ತಕರಾರು ಅರ್ಜಿ ಸಲ್ಲಿಸಿರುತ್ತಾರೆ. ದೊಡ್ಡ ಮನುಷ್ಯರು ಪರಿಷ್ಕಾರ ಮಾಡಿದ ಪ್ರಕಾರ ತಕರಾರು ಅರ್ಜಿಯನ್ನು ಬೇಷರತ್ತಾಗಿ ಹಿಂದಕ್ಕೆ ಪಡೆದು ನಮ್ಮಗಳ ಜಂಟಿ ಹೆಸರಿಗೆ ಹಕ್ಕು ಬದಲಾವಣೆ ಮಾಡಬಹುದು ಇನ್ನು ಮುಂದೆ ಯಾವುದೇ ತಕರಾರು ಅರ್ಜಿ ಸಲ್ಲಿಸುವುದಿಲ್ಲ ಕಾರಣ ನಮ್ಮಗಳ ಜಂಟಿ ಹೆಸರಿನಲ್ಲಿ ಪೋತಿ ವಾರಸತ್ವ ಪ್ರಕಾರ ಹಕ್ಕು ಬದಲಾವಣೆ ಮಾಡಲು ಪ್ರಮಾಣ ಪತ್ರ ಸಲ್ಲಿಸಿರುತ್ತಾರೆ.

## ಪ್ರತಿವಾದಿಗಳು

ಪ್ರತಿವಾದಿಗಳಾದ ಯು. ನಾಗರಾಜ ತಂದೆ: ಯು.ಸಣ್ಣ ಮಾರೆಪ್ಪ ಲೇಟ್, ಮುಷ್ಟಿಗಟ್ಟಿ ಗ್ರಾಮ, ಬಳ್ಳಾರಿ ತಾಲೂಕ ಇವರು ಉತ್ತನೂರು ಗ್ರಾಮದ ಸ.ನಂ.**8C/1B** ವಿಸ್ತೀರ್ಣ **0-62, 8C/3A** ವಿಸ್ತೀರ್ಣ **0-50, 8C/3B** ವಿಸ್ತೀರ್ಣ **0-53, 185/F2** ವಿಸ್ತೀರ್ಣ **2-90** ಸೆಂಟ್ಸ್ ಜಮೀನುಗಳು ನಮ್ಮ ತಾತನವರ ಹೆಸರಿನಲ್ಲಿ ಇದ್ದು ಈಗ ತಾತನವರು ಮೃತರಾಗಿರುವುದರಿಂದ ಪೋತಿ ವಾರಸತ್ವ ಪ್ರಕರ ಚಿಕ್ಕಪ್ಪ, ದೊಡ್ಡಮ್ಮ ಹಾಗೂ ತಾಯಿ ಜಂಟಿ ಹೆಸರಿನಲ್ಲಿ ಹಕ್ಕು ಬದಲಾವಣೆ ಮಡುವ ಸಂದರ್ಭದಲ್ಲಿ ನನಗೂ ಪಾಲು ಬರಬೇಕೆಂದು ದಿ:30-10-2015 ರಂದು ತಕರಾರುಅರ್ಜಿ ಸಲ್ಲಿಸಿದ್ದು ಈಗ ದೊಡ್ಡ ಮನುಷ್ಯರು ಪರಿಷ್ಕಾರ ಮಾಡಿದಪ್ರಕಾರ ತಕರಾರು ಅರ್ಜಿಯನ್ನು ಬೇಷರತ್ತಾಗಿ ಹಿಂದಕ್ಕೆ ಪಡೆಯಲು ಸಮ್ಮತಿಸಿರುತ್ತೇನೆಂದು ಹಾಗೂ 1) ದೊಡ್ಡ ಬಸಪ್ಪ ತಂದೆ: ದೊಡ್ಡ ಈರಣ್ಣ 2) ಮಲ್ಲಮ್ಮ ಗಂಡ: ದೊಡ್ಡ ಮಾರೆಪ್ಪ 3) ಅಂಜಿನಮ್ಮ ಗಂಡ: ಸಣ್ಣ ಮಾರೆಪ್ಪ, ಮುಷ್ಟಗಟ್ಟಿ ಗ್ರಾಮ ಇವರ ಜಂಟಿ ಹೆಸರಿನಲ್ಲಿ ಪೋತಿ ವಾರಸತ್ವ ಪ್ರಕಾರ ಹಕ್ಕು ಬದಲಾವಣೆ ಮಾಡಬಹುದೆಂದು ಪ್ರಮಾಣ ಪತ್ರ ಸಲ್ಲಿಸಿರುತ್ತೇನೆ.

ವಾದಿ ಮತ್ತು ಪ್ರತಿವಾದಿಗಳ ವಾದವನ್ನು ಆಲಿಸಿ ವಿಚಾರಣೆ ಮಾಡಲಾಗಿ ಸದರಿ ಜಮೀನು ಪೋತಿ ವಾರಸತ್ವ ಪ್ರಕಾರ ಹಕ್ಕು ಬದಲಾವಣೆ ಮಂಜೂರು ಮಾಡಲು ಈ ಕೆಳಕಂಡಂತೆ

## ಆದೇಶ

ಪೀಠಿಕೆಯಲ್ಲಿ ವಿವರಿಸಿದಂತೆ ಸಿರುಗುಪ್ಪ ತಾಲೂಕಿನ ಉತ್ತನೂರು ಗ್ರಾಮದ ಸ.ನಂ.**8C/1B** ವಿಸ್ತೀರ್ಣ **0-62, 8C/3A** ವಿಸ್ತೀರ್ಣ **0-50, 8C/3B** ವಿಸ್ತೀರ್ಣ **0-53, 185/F2** ವಿಸ್ತೀರ್ಣ **2-90** ಸೆಂಟ್ಸ್ ಜಮೀನು 1) ದೊಡ್ಡ ಬಸಪ್ಪ ತಂದೆ: ದೊಡ್ಡ ಈರಣ್ಣ 2) ಮಲ್ಲಮ್ಮ ಗಂಡ: ದೊಡ್ಡ ಮಾರೆಪ್ಪ 3) ಅಂಜಿನಮ್ಮ ಗಂಡ: ಸಣ್ಣ ಮಾರೆಪ್ಪ, ಇವರ ಜಂಟಿಹೆಸರಿಗೆ ಹಕ್ಕು ಬದಲಾವಣೆ ಮಂಜೂರು ಮಾಡಲು ಆದೇಶಿಸಿದೆ.

ಈ ಆದೇಶವನ್ನು ದಿನಾಂಕ: 17-06-2016 ರಂದು ಹಕ್ಕು ಬದಲಾವಣೆ ಮಾಡಲು ತೆರೆದ ನ್ಯಾಯಾಲಯದಲ್ಲಿ ಘೋಷಣೆ ಮಾಡಲಾಗಿದೆ.

ಉಪ ತಹಶೀಲ್ದಾರರು
ಕರೂರು
ನಾಡ ಕಚೇರಿ
ಸಿರುಗುಪ್ಪ ತಾ

ಇದರ ಪ್ರತಿಯನ್ನು:

1. ವಾದಿ ಹಾಗೂ ಪ್ರತಿವಾದಿಗಳಿಗೆ
2. ತಹಶೀಲ್ದಾರರ ಕಾರ್ಯಾಲಯ [illegible]